**ದಿನಾಂಕಃ 02.02.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ ಎಂ ಎಸ್ ಕೆ ವಕೀಲರಿಂದಃ-**

ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು ಅಡಿಕೆ ವ್ಯಾಪಾರ ಮಾಡುತ್ತೇನೆ. ನಾನು ಕಳೆದ 10 ರಿಂದ 18 ವರ್ಷದಿಂದ ಅಡಿಕೆ ವ್ಯಾಪಾರ ಮಾಡುತ್ತಿದ್ದೇನೆ. ನನಗೆ ಈಗ 35 ವರ್ಷ ವಯಸ್ಸು. ನನಗೆ ಪ್ರತಿವಾದಿಗಳು ಕ್ರಯದ ಕರಾರು ಮಾಡಿಕೊಂಡಾಗಿನಿಂದ ಪರಿಚಯ ಇರುತ್ತಾರೆ. ಅದಕ್ಕಿನ್ನ ಮುನ್ನಾ ಅವರ ಪರಿಚಯ ಇರಲಿಲ್ಲ. ನಾನು ಜಮೀನನ್ನು ನೋಡಲು ಒಟ್ಟು ಚೌಳಹಿರಿಯೂರಿಗೆ ಎರಡು ಬಾರಿ ಹೋಗಿರುತ್ತೇನೆ. ಜಮೀನಿಗೆ ಸಂಬಂಧಿಸಿದಂತೆ ನಾನು ಮೂಲ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ನಾನು ದಾವಾ ಸ್ವತ್ತಿಗೆ ಸಂಬಂಧಿಸಿದ ಪಹಣಿ ಮತ್ತು ಎಂ ಆರ್ ನೋಡಿರುತ್ತೇನೆ, ಸಾಕ್ಷಿ ಮುಂದುವರೆದು ನೋಂದಾಯಿತ ಪತ್ರವನ್ನೂ ಸಹ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಜಾಗದಲ್ಲಿ ಯಾವುದೇ ಬೆಳೆ ಬೆಳೆದಿರುವುದಿಲ್ಲ.

ಪ್ರತಿವಾದಿ 1 ಮತ್ತು 2 ರವರ ತಂದೆ ಬದುಕಿರುವುದಿಲ್ಲ. ಪ್ರತಿವಾದಿಗಳಿಗೆ ಇಬ್ಬರು ತಂಗಿಯರು ಇದ್ದಾರೆ ಎಂದರೆ ಸರಿ. ಜಡೇ ಮಲ್ಲಪ್ಪ ರವರು ತೀರಿಕೊಂಡಿದ್ದಾರೆ ಎಂದು ಮಲ್ಲಯ್ಯ ರವರು ತಿಳಿಸಿರುತ್ತಾರೆ. ಜಡೇ ಮಲ್ಲಪ್ಪ ರವರು ತೀರಿಕೊಂಡಿರುವುದಿಲ್ಲ ಮತ್ತು ದಾವಾ ಸ್ವತ್ತು ಜಡೇ ಮಲ್ಲಪ್ಪ ರವರ ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತು ಜಡೇ ಮಲ್ಲಪ್ಪ ರವರಿಗೆ 1972-73 ರಲ್ಲಿ ಬಂದ ಸ್ವತ್ತು ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಜಡೇ ಮಲ್ಲಪ್ಪನವರು ದಾವಾ ಸ್ವತ್ತಿನಲ್ಲಿ ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. 1972-73 ರ ನಂತರ ಜಡೇ ಮಲ್ಲಪ್ಪನವರ ಕುಟುಂಬದಲ್ಲಿ ವಿಭಾಗವಾಗಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಪಹಣಿಯಲ್ಲಿ 1 ನೇ ಪ್ರತಿವಾದಿ ಹೆಸರು ಇದೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನ ಪೂರ್ವಕ್ಕೆ : ಬೂದಾಳ್, ಪಶ್ಚಿಮಕ್ಕೆ : ಮಹೇಶ್ವರಪ್ಪ ರವರ ಜಮೀನು, ಉತ್ತರಕ್ಕೆ : ಪ್ಲಾಂಟೇಷನ್, ದಕ್ಷಿಣಕ್ಕೆ : ಚಂದ್ರಶೇಖರ್ ಮತ್ತು ಅಂಬಿಕಾ ರವರ ಜಮೀನು. ನಾನು ಹೇಳಿದಂತೆ ಚಕ್ಕುಬಂದಿಯ ಯಾವುದೇ ಜಮೀನು ಅಸ್ತಿತ್ವದಲ್ಲಿಲ್ಲ ಎಂದರೆ ಸರಿಯಲ್ಲ. ಚಂದ್ರಪ್ಪ ರವರ ಮಗ ಮಲ್ಲಿಕ ರವರ ಪರಿಚಯ ಇರುವುದಿಲ್ಲ. ದಾವಾ ಸ್ವತ್ತಿನ ಮೌಲ್ಯವನ್ನು ಕರಾರು ಮಾಡಿಕೊಳ್ಳುವ ಸಮಯದಲ್ಲಿ ವಿಚಾರಿಸಿರುತ್ತೇನೆ. ದಾವಾ ಸ್ವತ್ತಿನಲ್ಲಿ ತೆಂಗಿನ ತೋಟ ಇದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಖಾಲಿ ಇದೆ ಎಂದು ನುಡಿಯುತ್ತಾರೆ. 2014-15 ರ ಸಮಯದಲ್ಲಿ ಚೌಳಹಿರಿಯೂರಿನ ಗಂಗನಹಳ್ಳಿ ಗ್ರಾಮದ ಪ್ರತಿ ಎಕರೆಗೆ ರೂ.2,15,000-00 ಮಾರುಕಟ್ಟೆ ಮೌಲ್ಯ ಇತ್ತು ಎಂದರೆ ಸಾಕ್ಷಿ ವಿಚಾರಿಸಿದ್ದೆ ಆದರೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ.

ನನ್ನ ವಿರುದ್ಧ ಚಿಕ್ಕಮಗಳೂರು ಮತ್ತು ಕಡೂರಿನ ನ್ಯಾಯಾಲಯಗಳಲ್ಲಿ ಹಲವಾರು ಚೆಕ್ ಅಮಾನ್ಯ ಪ್ರಕರಣ ಮತ್ತು ಸಿವಿಲ್ ದಾವೆಗಳು ಇವೆ ಎಂದರೆ ಸಾಕ್ಷಿಯು ಚೆಕ್ ಅಮಾನ್ಯ ಪ್ರಕರಣಗಳು ಇತ್ತು ಆದರೆ ಈಗ ಇಲ್ಲಾ ಎಂದು ನುಡಿಯುತ್ತಾರೆ. ಈಗಲೂ ಸಹ ಹಲವಾರು ಪ್ರಕರಣ ಇದೆ ಎಂದರೆ ಸಾಕ್ಷಿಯು ಒಂದು ಪ್ರಕರಣ ಇದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪಹಣಿ ಈಗ ಜಡೇ ಮಲ್ಲಪ್ಪನವರ ಹೆಸರಿನಲ್ಲಿದೆ ಮತ್ತು 2015 ರಲ್ಲಿ ಕೇವಲ ಸ್ವತ್ತನ್ನು ನೋಡಿಕೊಳ್ಳಲು ಖಾತೆ 1 ರಿಂದ 3 ನೇ ಪ್ರತಿವಾದಿಗಳ ಹೆಸರಿಗೆ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ಸ್ವತ್ತನ್ನು ಮಾರಾಟ ಮಾಡುತ್ತೇವೆ ಎಂದು ಯಾವುದೇ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನಿಂದ ಪಡೆದ ರೂ.50,000 ಸಾಲಕ್ಕೆ ನಿಪಿ-1 ರ ದಾಖಲೆಯನ್ನು ನಾನು ಭದ್ರತೆಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನನ್ನಿಂದ ಪಡೆದ ರೂ.50,000-00 ಸಾಲ ಮತ್ತು ಬಡ್ಡಿಯನ್ನು ತೀರಿಸಿದ್ದರೂ ನಾನು ಕರಾರನ್ನು ರದ್ದುಪಡಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ವಿರುದ್ಧ ದ್ವೇಷದಿಂದ ನಿಪಿ-2 ರಂತೆ ನೋಟಿಸು ನೀಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಪ್ರತ್ಯುತ್ತರ ನೀಡಿದ 2 ವರ್ಷದ ನಂತರ ದಾವೆ ಹೂಡಿದ್ದೇನೆ ಎಂದರೆ ಸರಿ.

ಕ್ರಯದ ಕರಾರರನ್ನು ಬೆರಳಚ್ಚುಗೊಳಿಸಲಾಗಿರುತ್ತದೆ. ತಾಲ್ಲೂಕು ಕಛೇರಿಯ ಮುಂದೆ ನಿಪಿ-1 ಕರಾರು ಪತ್ರವನ್ನು ಬೆರಳಚ್ಚು ಮಾಡಿಸಲಾಯಿತು. ನಿಪಿ-1 ಕರಾರು ಪತ್ರ ಆದಾಗ ನಿಜಗುಣ ರವರು ಇದ್ದರು. ಮತ್ತೊಬ್ಬರು ಇದ್ದರು ಅವರ ಹೆಸರು ನೆನಪಿರುವುದಿಲ್ಲ. ನಿಪಿ-1 ಹಣಕಾಸಿನ ಭದ್ರತೆಗಾಗಿ ಮಾಡಲಾಗಿದೆ ಎಂದರೆ ಸರಿಯಲ್ಲ.

<u>( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು)</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.